ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 10-01-1990.

# *ಹೋಲಿ ಹಂಸಗಳ ವಿಶೇಷತೆಗಳು.*

(होलीहँस की विशेषताऐ)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸರ್ವಮಕ್ಕಳನ್ನು ವಿಶೇಷ ಅತ್ಮರನ್ನಾಗಿ ಮಾಡುವ ಬಾಪ್‌ದಾದಾ ಪ್ರತಿಯೊಂದು ಹೋಲಿ ಮಕ್ಕಳ ವಿಶೇಷತೆಯನ್ನು ನೋಡುತ್ತಿದ್ದಾರೆ.  ಹೇಗೆ ಹಂಸಕ್ಕೆ ನಿರ್ಣಯಯ ಶಕ್ತಿ ಮತ್ತು ಪರಿಶೀಲಿಸುವ ಶಕ್ತಿಯು ವಿಶೇಷವಾಗಿರುತ್ತದೆ. ಆದ್ದರಿಂದ ಗ್ರಹಿಸುವ ಶಕ್ತಿ ಕೂಡ ವಿಶೇಷವಾಗಿ ಇರುತ್ತದೆ. ಅದರ ಆಧಾರದ ಮೇಲೆ ಮುತ್ತು ಮತ್ತು ಕಲ್ಲು ಎರಡನ್ನೂ ಗುರುತಿಸುತ್ತದೆ ಮತ್ತು ನಿರ್ಣಯ ಮಾಡುತ್ತದೆ. ಅದರ ನಂತರ ಮುತ್ತುಗಳನ್ನು ಗ್ರಹಿಸುತ್ತದೆ, ಕಲ್ಲುಗಳನ್ನು ಬಿಟ್ಟುಬಿಡುತ್ತದೆ ಅಂದಾಗ ಪರಿಶೀಲಿಸುವುದು ನಿರ್ಣಯ ಮಾಡುವುದು ಮತ್ತು ಗ್ರಹಿಸುವುದು ಅರ್ಥಾತ್ ಧಾರಣೆ ಮಾಡಿಕೊಳ್ಳುವುದು. ಈ ಮೂರೂ ಶಕ್ತಿಗಳ ವಿಶೇಷತೆಯ ಕಾರಣ ಸಂಗಮಯುಗೀ ಸರಸ್ವತಿ ಮಾತೆಯ ವಾಹನವಾಗಿ ಹಂಸವನ್ನು ತೋರಿಸುತ್ತಾರೆ. ಅಂದಾಗ ಕೇವಲ ಒಬ್ಬ ಸರಸ್ವತಿ ಮಾತೆಯ ನೆನಪಾರ್ಥವಲ್ಲ ಆದರೆ ಮಾತೆಯ ಸಮಾನರಾಗುವಂತಹ ವೀಣಾವಾದಿನಿಯರು ತಾವೆಲ್ಲರೂ ಆ ಜ್ಞಾನವನ್ನು ಧಾರಣೆ ಮಾಡಿಕೊಳ್ಳುವುದಕ್ಕಾಗಿಯೂ ಈ ಮೂರು ವಿಶೇಷತೆಗಳು ಅತ್ಯವಶ್ಯಕವಾಗಿವೆ. ನೀವೆಲ್ಲರೂ ಬ್ರಾಹ್ಮಣ ಜೀವನವನ್ನು ಧಾರಣೆ ಮಾಡಿಕೊಳ್ಳುತ್ತಿದ್ದಂತೆಯ ಜ್ಞಾನದ ಮೂಲಕ ವಿವೇಕದ ಮೂಲಕ ಮೊದಲು ಪರಿಶೀಲಿಸುವ ಶಕ್ತಿಯ ಆಧಾರದಿಂದ ತಂದೆಯನ್ನು ಅರಿತುಕೊಂಡಿದ್ದೀರಿ, ತಮ್ಮನ್ನು ತಾವು ಅರಿತುಕೊಂಡಿದ್ದೀರಿ. ಸಮಯವನ್ನು ಅರಿತಿರಿ. ತಮ್ಮ ಬ್ರಾಹ್ಮಣ ಪರಿವಾರವನ್ನು ಅರಿತುಕೊಂಡಿದ್ದೀರಿ. ತಮ್ಮ ಶ್ರೇಷ್ಠ ಕರ್ತವ್ಯವನ್ನು ಅರಿತುಕೊಂಡಿದ್ದೀರಿ. ಇದರ ನಂತರ ನಿರ್ಣಯ ಮಾಡಿದಿರಿ ಆದ್ದರಿಂದಲೇ ಬ್ರಾಹ್ಮಣ ಜೀವನವನ್ನು ಧಾರಣೆ ಮಾಡಿಕೊಂಡಿದ್ದೀರಿ. ಇವರೇ ಕಲ್ಪದ ಹಿಂದಿನ ಬೇಹದ್ದಿನ ತಂದೆಯಾಗಿದ್ದಾರೆ. ಪರಮಾತ್ಮನಾಗಿದ್ದಾರೆ. ನಾನೂ ಸಹ ಕಲ್ಪದ ಹಿಂದಿನ ಅದೇ ಶ್ರೇಷ್ಠ ಆತ್ಮನಾಗಿದ್ದೇನೆ. ಅಧಿಕಾರಿ ಆತ್ಮನಾಗಿದ್ದೇನೆ. ಇದನ್ನು ಗುರುತಿಸಿದ ನಂತರ ನಿರ್ಣಯ ಮಾಡಿದಿರಿ. ತಂದೆಯನ್ನು ಗುರುತಿಸದೇ ನಿರ್ಣಯ ಮಾಡಲು ಸಾಧ್ಯವಿಲ್ಲ. ಕೆಲವು ಆತ್ಮರು ಇಲ್ಲಿಯವರೆಗೂ ಸಂಬಂಧ-ಸಂಪರ್ಕದಲ್ಲಿದ್ದಾರೆ, ಬಹಳ ಚೆನ್ನಾಗಿದೆ ಬಹಳ ಚೆನ್ನಾಗಿದೆ ಎಂದು ಹೇಳುತ್ತಾ ಇರುತ್ತಾರೆ ಆದರೆ ಪರಮಾತ್ಮನ ಪರಿಚಯ ಹಾಗೂ ಪರಿಶೀಲಿಸುವ(ಪರೀಕ್ಷಿಸುವ) ಶಕ್ತಿಯಿಲ್ಲದೇ ಇರುವ ಕಾರಣ ನಾವು ಏನಾಗಬೇಕು ಮತ್ತು ಏನು ಮಾಡಬೇಕು ಎಂಬುದನ್ನು ನಿರ್ಣಯ ಮಾಡಲು ಆಗುತ್ತಿಲ್ಲ ಆದ್ದರಿಂದ ಬ್ರಾಹ್ಮಣ ಜೀವನವನ್ನು

ಧಾರಣೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸಹಯೋಗಿಗಳಾಗುತ್ತಾರೆ ಆದರೆ ಸಹಜಯೋಗಿ ಜೀವನವನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ ಏಕೆಂದರೆ ಎರಡೂ ಶಕ್ತಿಗಳಿಲ್ಲ ಆದ್ದರಿಂದ ಹೋಲಿ ಹಂಸರಾಲು ಸಾಧ್ಯವಿಲ್ಲ. ಪವಿತ್ರತಾ ರೂಪಿ ಮುತ್ತು ಮತ್ತು ಅಪವಿತ್ರತಾ ರೂಪಿ ಕಲ್ಲು ಎರಡನ್ನೂ ಬೇರೆ-ಬೇರೆ ಎಂದು ತಿಳಿದುಕೊಳ್ಳುವುದಿಲ್ಲ ಆದ್ದರಿಂದ ಪವಿತ್ರತೆಯನ್ನು ಗ್ರಹಿಸುವ ಶಕ್ತಿಯು ಬರಲು ಸಾಧ್ಯವಿಲ್ಲ ಅಂದಾಗ ಹೋಲಿಹಂಸದ ವಿಶೇಷತೆಯಾಗಿದೆ - ಮೊದಲಶಕ್ತಿ ಪರಿಶೀಲಿಸುವುದು ಅರ್ಥಾನ್ ಅರಿತುಕೊಳ್ಳುವುದು. ತಾವು ಪವಿತ್ರ ಹಂಸಗಳಲ್ಲಿ ಇವೆರಡೂ ಶಕ್ತಿಗಳು ಇವೆಯಲ್ಲವೆ ಏಕೆಂದರೆ ತಂದೆಯನ್ನು ಅರಿತುಕೊಂಡಿದ್ದೀರಿ. ತಮ್ಮನ್ನು ತಾವು ಅರಿತುಕೊಂಡಿದ್ದೀರಿ. ಸರಿಯಾದ ನಿರ್ಣಯ ಮಾಡಿದ್ದೀರಿ ಆದ್ದರಿಂದಲೇ ಬ್ರಾಹ್ಮಣರಾಗಿದ್ದೀರಿ ಮತ್ತು ನಡೆಯುತ್ತಿದ್ದೀರಿ. ಈ ಮಾತಿನಲ್ಲಿ ಎಲ್ಲರೂ ಪಕ್ಕಾ ಪಾಸಾಗಿದ್ದೀರಿ. ಆದರೆ ಯಾವ ಸೇವೆ ಮಾಡುತ್ತಿದ್ದೀರಿ ಮತ್ತು ಕರ್ಮದಲ್ಲಿ ಬರುತ್ತಿದ್ದೀರಿ ಇಡೀ ದಿನದ ದಿನಚರಿಯಲ್ಲಿ ಯಾವ ಕರ್ಮ ಮಾಡುತ್ತಿರುವಿರೋ ಸಂಬಂಧ-ಸಂಪರ್ಕದಲ್ಲಿ ಬರುತ್ತೀರೋ ಅದರಲ್ಲಿ ಪ್ರತೀಕರ್ಮವು ಸಫಲತಾ ಪೂರ್ವಕವಾಗಿರಲಿ ಹಾಗೂ ಸಂಪರ್ಕದಲ್ಲಿರುವ ಪ್ರತಿಯೊಂದು ಆತ್ಮನ ಸಂಬಂಧದಲ್ಲಿ ಬರುವುದರಲ್ಲಿ ಸದಾ ಸಫಲತೆಯಿರಲಿ. ಪ್ರತಿಯೊಂದು ಪ್ರಕಾರದ ಸೇವೆ ಮನಸಾ-ವಾಚಾ-ಕರ್ಮಣಾ ಮೂರರಲ್ಲಿಯೂ ಸದಾ ಸಫಲತೆಯ ಅನುಭವವಾಗಲಿ ಅದಕ್ಕೂ ಆಧಾರ- ಪರಿಶೀಲಿಸುವಶಕ್ತಿ ಮತ್ತು ನಿರ್ಣಯ ಶಕ್ತಿ ಇದರಲ್ಲಿ ಪೂರ್ಣ ಪಾಸ್ ಆಗಿದ್ದೀರಾ?

ಸೇವೆಯ ಸಫಲತೆ ಹಾಗೂ ಸಂಪರ್ಕದಲ್ಲಿ ಸಫಲತೆ ಸದಾ ಬರದೇ ಇರಲು ಕಾರಣ ಪರಿಶೀಲಿಸಿಕೊಳ್ಳಿರಿ - ಕಾರ್ಯವನ್ನು, ವ್ಯಕ್ತಿಯನ್ನು, ಆತ್ಮನನ್ನು ಪರಿಶೀಲಿಸುವುದರಲ್ಲಿ ಅಂತರ ಬಂದುಬಿಡುತ್ತದೆ. ಯಾವ ಆತ್ಮ, ಯಾವ ಸಮಯದಲ್ಲಿ ಯಾವ ವಿಧಿಪೂರ್ವಕ ಸಹಯೋಗ ಬೇಕೋ ಅಥವಾ ಶಿಕ್ಷಣ ಬೇಕೋ, ಸ್ನೇಹ ಬೇಕೋ ಅದನ್ನು ಪರಿಶೀಲಿಸುವ ಶಕ್ತಿ ಆ ಸಮಯದಲ್ಲಿ ತೀವ್ರವಾಗಿದ್ದರೆ ಸಂಬಂಧದಲ್ಲಿ ತಪ್ಪದೇ ಸಫಲತೆ ಲಭಿಸುತ್ತದೆ. ಆದರೆ ಆಗುವುದೇನು? ಯಾವ ಆತ್ಮನಿಗೆ ಯಾವ ಸಹಯೋಗ ಅಥವಾ ವಿಧಿಯು ಆ ಸಮಯದಲ್ಲಿ ಬೇಕೋ ಅದನ್ನು ಕೊಡದೆ ಪರಿಶೀಲಿಸದೇ ಇರುವ ಕಾರಣ ತಮ್ಮ ಪದ್ಧತಿಯಿಂದ ಅವರಿಗೆ ಸಹಯೋಗ ಕೊಡುತ್ತೀರಿ. ಅಥವಾ ವಿಧಿಯನ್ನು ಅಳವಡಿಸಿಕೊಳ್ಳುತ್ತೀರಿ ಆದ್ದರಿಂದ ಸಂತುಷ್ಟತೆಯ ಸಫಲತೆ ಸಿಗುವುದಿಲ್ಲ. ಹೇಗೆ ಶಾರೀರಿಕ ಕಾಯಿಲೆಯನ್ನು ಗುರುತಿಸುವ ವಿಧಿಯೇ ವೈದ್ಯರಿಗೆ ಬರದೇ ಇದ್ದರೆ ಏನಾಗುತ್ತದೆ? ವಾಸಿಯಾಗುವ ಬದಲಾಗಿ ಒಂದರಿಂದ ಅನೇಕ ರೋಗಗಳು ಉಂಟಾಗುತ್ತವೆ. ರೋಗಿಗೆ ಸಂತುಷ್ಟತೆಯಾಗುವ ಸಫಲತೆಯು ಸಿಗುವುದಿಲ್ಲ. ಅದಕ್ಕೆ ಸಾಧಾರಣ ಶಬ್ದಗಳಲ್ಲಿ ಬಾಪ್‌ದಾದಾ ಹೇಳುತ್ತಾರೆ. ಪ್ರತಿಯೊಬ್ಬರ ನಾಡಿಯನ್ನು ತಿಳಿದುಕೊಳ್ಳಿ. ನಡೆಯುವುದು ಮತ್ತು ನಡೆಸುವುದೂ ಸಹ ಅತ್ಯವಶ್ಯಕವಾಗಿದೆ ಅಂದಾಗ ಏನು ಮಾಡಬೇಕಾಗುವುದು? ತಿಳಿದುಕೊಳ್ಳುವ ಅರ್ಥಾತ್ ಪರಿಶೀಲಿಸುವ ಶಕ್ತಿಯನ್ನು ತೀವ್ರ ಮಾಡಿಕೊಳ್ಳಬೇಕಾಗಿದೆ. ಇದರಲ್ಲಿ ಅಂತರವಾಗಿ ಬಿಡುತ್ತದೆ. ಅದಕ್ಕೆ ತಾವು ಸಾಧಾರಣ ಭಾಷೆಯಲ್ಲಿ ಹ್ಯಾಂಡ್ಲಿಂಗ್‌ನ ಕೊರತೆಯೆಂದು ಹೇಳುತ್ತೀರಿ. ಇವರ ಸಂಬಾಳಿಸುವ(ಹ್ಯಾಂಡ್ಲಿಂಗ್) ಪದ್ಧತಿ ಹಳೆಯದಾಗಿದೆ. ಇವರದು ಹೊಸದಾಗಿದೆ ಎಂದು ಹೇಳುತ್ತೀರಲ್ಲವೆ. ಈ ಅಂತರ ಏಕೆ ಆಯಿತು? ಏಕೆಂದರೆ ಪ್ರತೀಸಮಯ ಪ್ರತಿಯೊಂದು ಆತ್ಮ ಮತ್ತು ಪ್ರತೀ ಕಾರ್ಯವನ್ನು ಗುರುತಿಸುವ ಶಕ್ತಿಯು ಬೇಕು. ಒಟ್ಟಾಗಿ ಗುರುತಿಸುವ ಶಕ್ತಿಯು ಬಂದುಬಿಟ್ಟಿದೆ ಆದರೆ ವಿಸ್ತಾರದಿಂದ ಇನ್ನೂ ಬೇಹದ್ದಿನ ಪರಿಶೀಲಿಸುವ ಶಕ್ತಿಯ ಅವಶ್ಯಕತೆಯಿದೆ ಆ ಸಮಯದಲ್ಲಿ ಆತ್ಮರ ಗ್ರಹಿಸುವ ಶಕ್ತಿಯು ಎಷ್ಟಿದೆ. ವಾಯುಮಂಡಲ ಹೇಗಿದೆ ಮತ್ತು ಆ ಆತ್ಮನು ಕೇಳುವ ಅಥವಾ ಶಿಕ್ಷಣ ತೆಗೆದುಕೊಳ್ಳುವ ಮನೋಸ್ಥಿತಿಯು ಹೇಗೆ ಇದೆ ಎಂದು. ಹೇಗೆ ಯಾರಾದರೂ ನಿರ್ಬಲರಾಗಿದ್ದಾಗ ಅವರಿಗೆ ಅತೀ ಹೆಚ್ಚು ತಾಕತ್ತಿನ ಇಂಜೆಕ್ಷನ್ ಕೊಟ್ಟುಬಿಟ್ಟರೆ ಅವರ ಸ್ಥಿತಿಯೇನಾಗುವುದು? ಪೇಶೆಂಟ್‌ನ ಬದಲು ಪೆಶೆನ್ಸ್ (ರೋಗಿ ಸಹಿಸಿಕೊಳ್ಳಬೇಕಾಗುತ್ತದೆ) ಮಾಡಬೇಕಾಗುತ್ತದೆ. ಹೃದಯಾಘಾತ ಆಗಿಬಿಡುತ್ತದೆ, ಶಾಂತಿಯಲ್ಲಿ ಹೊರಟುಹೋಗುತ್ತಾರೆ. ಹಾಗೆಯೇ ಒಂದುವೇಳೆ ಸಂಬಂಧದಲ್ಲಿ ಬರುವಂತಹ ಆತ್ಮನು ನಿರ್ಬಲನಾಗಿದ್ದರೆ ಆತ್ಮದಲ್ಲಿ ಧೈರ್ಯವಿಲ್ಲ ಆದರೆ ತಾವು ಅವರಿಗೆ ಶಿಕ್ಷಣದ ಡೋಸ್‌ನ್ನು ಕೊಡುತ್ತಾ ಹೋಗಿ, ಅವರ ಸ್ಥಿತಿ, ಸಮಯ ವಾಯುಮಂಡಲವನ್ನು ಗುರುತಿಸಲು ಆಗದಿದ್ದರೆ ಫಲಿತಾಂಶವೇನಾಗುತ್ತದೆ? ಒಂದನೆಯದಾಗಿ. ಹೃದಯ ವಿಧೀರ್ಣರಾಗಿ ಬಿಡುತ್ತಾರೆ ಮತ್ತು ಶಕ್ತಿಯಿಲ್ಲದೇ ಇರುವ ಕಾರಣ ಗ್ರಹಿಸಲು ಸಾಧ್ಯವಾಗುವುದಿಲ್ಲ. ಇನ್ನೂ ಜಿದ್ದು ಮತ್ತು ಸಿದ್ಧ ಮಾಡುವುದರಲ್ಲಿ ಮುಂದೆ ನಿಲ್ಲುತ್ತಾರೆ.

ತಾವಂತೂ ಒಳ್ಳೆಯ ಭಾವನೆಯಿಂದ ಮಾಡಿದಿರಿ ಆದರೆ ಸಫಲತೆಯು ಸಿಗದೇ ಇರಲು ಕಾರಣವಾಗಿದೆ- ಪರಿಶೀಲಿಸುವ ಹಾಗೂ ನಿರ್ಣಯ ಮಾಡುವ ಶಕ್ತಿಯ ಕೊರತೆ. ಆದ್ದರಿಂದ ಸಫಲತಾ ಮೂರ್ತಿಗಳಾಗುವುದರಲ್ಲಿ ಪರ್ಸೆಂಟೇಜ್ ಆಗಿಬಿಡುತ್ತದೆ. ಅಂದಮೇಲೆ ಇಡೀ ದಿನದ ಕರ್ಮ ಮತ್ತು ಸಂಬಂಧದಲ್ಲಿ ಪರಿಶೀಲಿಸುವ ಶಕ್ತಿಯ ಅವಶ್ಯಕತೆಯಿದೆ ಅಲ್ಲವೆ ಆದ್ದರಿಂದ ಭಲೆ ಶಿಕ್ಷಣ ಕೊಡಿ ಆದರೆ ಎಲ್ಲಾ ಮಾತುಗಳನ್ನು ಪರಿಶೀಲಿಸಿ ನಂತರ ಹಜ್ಜೆಯನ್ನು ಇಡಿ. ಹಾಗೆಯೇ ಸೇವಾಕ್ಷೇತ್ರದಲ್ಲಿಯೂ ಒಂದುವೇಳೆ ಅವರ ಅವಸರ ಮತ್ತು ಇಚ್ಛೆಯನ್ನು ಗುರುತಿಸದೆ ನೀವು ಎಷ್ಟಾದರೂ ಒಳ್ಳೆಯ ಜ್ಞಾನವನ್ನು ಕೊಡಿ, ಎಷ್ಟೇ ಪರಿಶ್ರಮ ಪಡಿ ಆದರೆ ಸಫಲತೆಯು ಬರುವುದಿಲ್ಲ. ಚೆನ್ನಾಗಿದೆ-ಚೆನ್ನಾಗಿದೆ" ಎಂದು ಹೇಳುವುದಂತೂ ಒಂದು ಪದ್ಧತಿಯಾಗಿಬಿಟ್ಟಿದೆ ಏಕೆಂದರೆ ತಾವು ಯಾವುದೇ ಕೆಟ್ಟ ಮಾತನ್ನಂತೂ ಹೇಳುವುದಿಲ್ಲ. ಆದರೆ ಸಫಲತೆಯ ಲಕ್ಷ್ಯವನ್ನು  ಸಮೀಪ ಅನುಭವ ಮಾಡಲು ಪರಿಶೀಲಿಸುವ ಶಕ್ತಿ ಅತ್ಯವಶ್ಯಕವಾಗಿದೆ. ಹೇಗೆ ಯಾರಾದರೂ ಮುಕ್ತಿಯ ಇಚ್ಛುಕರಾಗಿದ್ದಾರೆ ಮತ್ತು ಅವರಿಗೆ ತಾವು ಮುಕ್ತಿ-ಜೀವನ್ಮುಕ್ತಿ ಎರಡನ್ನೂ ಕೊಟ್ಟರೂ ಸಹ ಅವರಿಗೆ ರುಚಿಯಿರುವುದಿಲ್ಲ. ನೀರಿಗೆ ಬಾಯಾರಿದವರಿಗೆ 36 ಪ್ರಕಾರದ ಭೋಜನವನ್ನೇ ಕೊಡಿ ಆದರೆ ಅವರು ನೀರಿನಿಂದಲೇ ಸಂತುಷ್ಟರಾಗುವರೇ ಹೊರತು ಭೋಜನದಿಂದಲ್ಲ. ಹಾಗೆಯೇ ಮುಕ್ತಿಯ ಇಚ್ಛುಕರನ್ನು ಗುರುತಿಸಿ ಒಂದುವೇಳೆ ಅವರಿಗೆ ಮುಕ್ತಿಯ ಬಗ್ಗೆ ಸ್ಪಷ್ಟೀಕರಣ ಕೊಟ್ಟಾಗ ಅವರ ಇಚ್ಛೆಯೂ ಹೆಚ್ಚಾಗಿ ಜೀವನ್ಮುಕ್ತಿಯಲ್ಲಿ ಪರಿವರ್ತನೆಯೂ ಆಗಿಬಿಡುತ್ತಾರೆ. ಕೆಲವರಿಗೆ ಧಾರಣೆಯ ಮಾತುಗಳನ್ನು ಕೇಳಲು ಇಷ್ಟವಾಗುತ್ತದೆ. ಅವರಿಗೆ ತಾವು ಕಲ್ಪ 5000 ವರ್ಷಗಳು ಹಾಗೂ ಗೀತೆಯ ಭಗವಂತನು ಯಾರು. ಇದನ್ನು ತಿಳಿಸಲು ಆರಂಭಿಸುತ್ತೀರೆಂದರೆ ಅವರ ಆಸಕ್ತಿಯು ಇನ್ನೂ ಸಮಾಪ್ತಿಯಾಗಿ ಬಿಡುತ್ತದೆ. ಆದ್ದರಿಂದ ಸೇವೆಯಲ್ಲಿಯೂ ಆತ್ಮನ ಸ್ಥಿತಿ ಹಾಗೂ ಅವರ ನಂಬಿಕೆ ಏನಾಗಿದೆ? ಅದನ್ನು ಗುರುತಿಸುವುದು ಅವಶ್ಯಕವಾಗಿದೆ ಅಂದಮೇಲೆ ಸಫಲತೆಯ ಆಧಾರವು ಯಾವ ಶಕ್ತಿಯ ಮೇಲೆ ಇದೆ?  ಪರಿಶೀಲಿಸುವಶಕ್ತಿ ಬೇಕು. ಅಜ್ಞಾನಿ ಆತ್ಮರ ಸೇವೆಯಿರಬಹುದು. ಸೇವಾ ಜೊತೆಗಾರರ ಸೇವೆಯಿರಬಹುದು. ಎರಡರಲ್ಲಿ ಸಫಲತೆಗೆ ಆಧಾರವು. ಒಂದೇ ಆಗಿದೆ ಅಂದಾಗ ಪವಿತ್ರ ಹಂಸದ ವಿಶೇಷತೆ- ಎಲ್ಲದಕ್ಕಿಂತ ಮೊದಲು ಪರಿಶೀಲಿಸುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ. ಪರಿಶೀಲಿಸುವ ಶಕ್ತಿಯು ಯಥಾರ್ಥವಾಗಿದೆ, ಶ್ರೇಷ್ಠವಾಗಿದೆ ಎಂದರೆ ನಿರ್ಣಯವೂ ಯಥಾರ್ಥವಾಗಿರುವುದು ಮತ್ತು ತಾವು ಯಾರಿಗೆ ಏನನ್ನು ಕೊಡಬಯಸುತ್ತೀರೋ ಅದನ್ನು  ಗ್ರಹಿಸುವ ಶಕ್ತಿಯು  ಅವರಲ್ಲಿ ಸ್ವತಹ ಇರುವುದು ಮತ್ತು ಏನಾಗುವರು? ನಂಬರ್‌ವನ್ ಸಫಲತಾ ಮೂರ್ತಿಗಳು ಆದ್ದರಿಂದ ಸೇವೆಯಲ್ಲಿರಲಿ, ಸಂಬಂಧದಲ್ಲಿರಲಿ ಲಕ್ಷ್ಯವನ್ನು ಪ್ರಾಪ್ತಿ ಮಾಡಿಕೊಳ್ಳಲು ಈ ಲಕ್ಷಣವನ್ನು ಧಾರಣೆ ಮಾಡಿಕೊಳ್ಳಿರಿ.

ಇಡೀ ದಿನದಲ್ಲಿ ಪರಿಶೀಲನೆ ಮಾಡಿಕೊಳ್ಳಿ- ಇಡೀ ದಿನದ ದಿನಚರಿಯಲ್ಲಿ ಪರಿಶೀಲಿಸುವ (ಪರೀಕ್ಷಿಸುವ) ಶಕ್ತಿಯು ಎಲ್ಲಿಯವರೆಗೆ ಯಥಾರ್ಥವಾಗಿದೆ ಮತ್ತು ಎಲ್ಲಿ ತಿದ್ದುಪಡಿ ಮತ್ತು ಜೋಡಿಸುವ ಅವಶ್ಯಕತೆಯಿತ್ತು? ಮಾಡಿದ ನಂತರ ತಿದ್ದುಪಡಿ ತನಗೆ ತಾನೇ ಆಗುತ್ತದೆ. ಏಕೆಂದರೆ ದಿವ್ಯಬುದ್ಧಿಯ ವರದಾನವು ಎಲ್ಲರಿಗೂ ಸಿಕ್ಕಿದೆ. ಭಲೆ ಸಮಸ್ಯೆಗೆ ವಶರಾಗಿ, ಸಮಯ ಹಾಗೂ ಪರಿಸ್ಥಿತಿಗಳಿಗೆ ವಶರಾಗಿ ಮತ್ತು ಯಾವುದೋ ಆತ್ಮರ ಸಂಗಕ್ಕೆ ವಶರಾಗಿ ಇಲ್ಲವೆ ಮಾಯೆಯ ಮನ್ಮತಕ್ಕೆ ವಶರಾಗಿ ಆ ಸಮಯದಲ್ಲಿ ಪರವಶರಾಗಿಬಿಡುತ್ತೀರಿ ಆದರೆ ಸಮಯ, ಪರಿಸ್ಥಿತಿ, ಸಂಗದ ಪ್ರಭಾವ. ಮನ್ಮತದ ಪ್ರಭಾವವು ಹಗುರವಾದಮೇಲೆ ಮತ್ತೆ ತಮ್ಮ ದಿವ್ಯಬುದ್ಧಿಯು ಕೆಲಸ ಮಾಡುತ್ತದೆ. ಅದಕ್ಕೆ ತಾವು ಹೇಳುತ್ತೀರಿ- ಆವೇಶದಿಂದ  ಜಾಗೃತ ಅವಸ್ಥೆಗೆ ಬಂದುಬಿಟ್ಟೆವು. ನಂತರ ಅನುಭವವಾಗುತ್ತದೆ- ನಮ್ಮಲ್ಲಿ ಇದನ್ನು ಪರಿವರ್ತನೆ ಮಾಡಿಕೊಳ್ಳಬೇಕು ಮತ್ತು ಅಳವಡಿಸಿಕೊಳ್ಳಬೇಕಾಗಿತ್ತು ಅಥವಾ ಮಾಡಿಕೊಳ್ಳಬೇಕಾಗಿದೆ ಎಂದು. ಆದರೆ ರಿಜಿಸ್ಟರ್‌ನಲ್ಲಿ ಅಥವಾ ಕರ್ಮಲೆಕ್ಕಾಚಾರಗಳ ಪುಸ್ತಕದಲ್ಲಿ ದೊಡ್ಡ ಕಲೆಯೇನಲ್ಲ ಆದರೆ ಚುಕ್ಕೆಯಂತೂ ಬಿದ್ದಿತು. ಅದೂ ಸಹ ಸಂಪೂರ್ಣ ಸ್ವಚ್ಛವಾಗಿರುವಂತೆ ಕಾಣುವುದಿಲ್ಲ ಅಲ್ಲವೆ. ಆದ್ದರಿಂದಲೇ ಹೇಳಲಾಗುತ್ತದೆ- ಕರ್ಮಗಳ ಲೀಲೆಯು ಅತಿಗುಹ್ಯವಾಗಿದೆ.

ಟೀಚರ್ಸ್ ಕರ್ಮಗಳ ಲೀಲೆಯನ್ನು ಚೆನ್ನಾಗಿ ಅರಿತುಕೊಂಡಿದ್ದೀರಲ್ಲವೆ. ಮತ್ತು ಶಿಕ್ಷಕಿಯರು ಇಡೀ ದಿನ "ವಾಹ್ ನನ್ನ ಶ್ರೇಷ್ಠ ಕರ್ಮಗಳ ಲೀಲೆಗಳು" ಎಂಬ ಗೀತೆಯನ್ನು ಹಾಡುತ್ತೀರಿ. ಕರ್ಮದ ಗುಹ್ಯಗತಿಯ ಲೀಲೆಯನ್ನಲ್ಲ. ಶ್ರೇಷ್ಠ ಕರ್ಮಗಳ ಲೀಲೆಯನ್ನು

ಹಾಡುತ್ತಿದ್ದೀರಿ. ಪ್ರಾಪಂಚಿಕ ಪ್ರಜೆಗಳು ಪ್ರತಿಯೊಂದು ಕರ್ಮದಲ್ಲಿ, ಪ್ರತಿಯೊಂದು ಹೆಜ್ಜೆಯಲ್ಲಿ, ನನ್ನ ಕರ್ಮ, ನನ್ನ ಕರ್ಮ ಎಂದು ಹೇಳುತ್ತಿರುತ್ತಾರೆ(ಕುಟುಕುವುದು). ಆದರೆ ನೀವು "ವಾಹ್ ನನ್ನ ಶ್ರೇಷ್ಠಕರ್ಮ" ಎಂದು ಹೇಳುತ್ತೀರಿ, ಆದರೆ ಈಗ ಇನ್ನೂ ಮುಂದಕ್ಕೆ ಹೋಗಿ ಸದಾ ವಾಹ್ ಶ್ರೇಷ್ಠ ಕರ್ಮ ಎನ್ನಿರಿ ಸಾಧಾರಣ ಕರ್ಮವಲ್ಲ. ಕುಟುಕುವುದಂತೂ ಸಮಾಪ್ತಿಯಾಯಿತು ಆದರೆ ಸದಾ ಶ್ರೇಷ್ಠಕರ್ಮವೇ ಇರಲಿ. ಕರ್ಮ ಎಂದು ನಿಂದಿಸುವುದು (ಕುಟುಕುವುದು) ಸಮಾಪ್ತಿಯಂತೂ ಆಗುತ್ತದೆ ಆದರೆ ಶ್ರೇಷ್ಠಕರ್ಮವೇ ಮಾಡಬೇಕು ಎಂಬುದನ್ನು ಅಂಡರ್ ಲೈನ್ ಮಾಡಿಕೊಳ್ಳಬೇಕು. ಸಾಧಾರಣ ಕರ್ಮ ಮತ್ತು ಶ್ರೇಷ್ಠ ಕರ್ಮ ಎರಡು ಬೆರೆತಾಗ ಅದೇ ರೀತಿಯಾದ ಸಫಲತೆಯು ಬರುತ್ತದೆ. ಸಾಧಾರಣತೆಯನ್ನು ವಿಶೇಷತೆಯಲ್ಲಿ ಪರಿವರ್ತನೆ ಮಾಡಿಕೊಳ್ಳಿ. ಈಗ ಈ ವಿಶೇಷ ಗಮನವಿಡಿ ಪ್ರತಿಯೊಬ್ಬರ ಇಡೀ ದಿನಚರಿಯಲ್ಲಿ ಏನೇನು ನೋಡಿದ್ದೇನೆ ಎಂದು ಮತ್ತೊಮ್ಮೆ ಹೇಳುತ್ತೇನೆ. ಸಾಧಾರಣತೆ ಎಷ್ಟಿದೆ ಮತ್ತು ವಿಶೇಷತೆ ಎಷ್ಟಿದೆ ಎಂಬ ಫಲಿತಾಂಶವನ್ನು ನೋಡುತ್ತೀರಿ.

ಬಾಪ್‌ದಾದಾರವರ ಬಳಿ ನೋಡುವ ಸಾಧನಗಳು ಎಷ್ಟಿವೆಯೆಂದರೆ ಒಂದೇ ಸಮಯದಲ್ಲಿ ದೇಶ-ವಿದೇಶದ ಎಲ್ಲಾ ಮಕ್ಕಳನ್ನೂ ನೋಡಬಲ್ಲೆವು. ಬೇರೆ-ಬೇರೆಯಾಗಿ ನೋಡುವ ಅವಶ್ಯಕತೆಯಿಲ್ಲ. ಐದು ನಿಮಿಷಗಳಲ್ಲಿ ಎಲ್ಲರ ಬಗ್ಗೆ ಗೊತ್ತಾಗಿಬಿಡುತ್ತದೆ. ಮಕ್ಕಳ "ವಾಹ್- ವಾಹ್ ಗೀತೆಯನ್ನೂ ಹಾಡುತ್ತೇವೆ. ಜೊತೆಜೊತೆಗೆ ಸಮಾನರಾಗುವ ಉದ್ದೇಶದಿಂದ ಪರಿಶೀಲನೆಯನ್ನೂ ಮಾಡುತ್ತೇವೆ. ಮೊದಲೇ ತಿಳಿಸಿದ್ದೇವೆ- ತಂದೆಯ ಸ್ನೇಹ ಹಾಗೂ ತಂದೆಯನ್ನು ಗುರುತಿಸುವುದರಲ್ಲಿ ಎಲ್ಲರೂ ಉತ್ತೀರ್ಣರಾಗಿದ್ದೀರಿ ಮತ್ತು ಕೆಲಕೆಲವೊಮ್ಮೆ ಕಮಾಲ್‌ನ ಕೆಲಸವನ್ನೂ ಮಾಡುತ್ತೀರಿ. ಒಳ್ಳೆಯ ಕಮಾಲ್ ಆಗಿದೆ. ಧಮಾಲ್‌ನ ಕಮಾಲ್ ಅಲ್ಲ. ಕೆಲಕೆಲವು ಮಕ್ಕಳು ಧಮಾಲ್(ದಬ್ಬಾಳಿಕೆ) ನ ಕಮಾಲ್ ಮಾಡುತ್ತಾರಲ್ಲವೆ. ಆಗುವುದು ಧಮಾಲ್ ಆದರೆ ಇದು ನಮ್ಮ ಕಮಾಲ್ ಆಗಿದೆ ಎಂದು ಹೇಳುತ್ತಾರೆ. ಆದ್ದರಿಂದ ಬಾಪ್‌ದಾದಾ ಹೇಳುತ್ತೇವೆ- ಪರಿಶೀಲಿಸುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ. ತಮ್ಮ ಕರ್ಮಗಳನ್ನು ಗುರುತಿಸಬಲ್ಲಿರಿ, ಮತ್ತು ಅನ್ಯರ ಕರ್ಮಗಳನ್ನೂ ಯಥಾರ್ಥವಾಗಿ ಗುರುತಿಸಬಹುದು. ಉಲ್ಟಾ ಕರ್ಮವನ್ನು ಸುಲ್ಟಾ ಎಂದು ಹೇಳುವುದಲ್ಲ. ಇದು ಪರಿಶೀಲಿಸುವ ಶಕ್ತಿಯ ಕೊರತೆಯಾಗಿದೆ ಮತ್ತು ಸದಾ ಒಂದು ಮಾತನ್ನು ನೆನಪಿಟ್ಟುಕೊಳ್ಳಿ. ಇದನ್ನು ಎಲ್ಲರಿಗಾಗಿ ಹೇಳುತ್ತಿದ್ದೇವೆ – ಯಾವಾಗಲಾದರೂ ಯಾವುದಾದರೂ *ವ್ಯರ್ಥ ಅಥವಾ ಸಾಧಾರಣ ಕರ್ಮ ಮಾಡಬೇಕಾದಾಗ* ಇದು ಸರಿಯೇ ಅಥವಾ ತಪ್ಪೇ ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿದ್ದಾಗ, ಯಾವಾಗ ಇಂತಹ ಪರಿಸ್ಥಿತಿ ಬರುತ್ತದೆಯೋ, ವಶೀಭೂತರಾಗಿಬಿಡುತ್ತೀರೋ ಆ ಸಮಯದಲ್ಲಿ ಇಂತಹ ಪರಿಸ್ಥಿತಿಯಲ್ಲಿ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುವ ಶ್ರೇಷ್ಠವಿಧಿ ಯಾವುದಾಗಿದೆ? ಏಕೆಂದರೆ ಆ ಸಮಯದಲ್ಲಿ ತಮ್ಮ ಬುದ್ಧಿಯಂತೂ ವಶೀಭೂತವಾಗಿದೆ. ಸರಿಯನ್ನು ತಪ್ಪೆಂದು ತಿಳಿದುಕೊಳ್ಳುತ್ತೀರಿ, ತಪ್ಪನ್ನು ತಪ್ಪು ಎಂದು ತಿಳಿದುಕೊಳ್ಳುವುದಿಲ್ಲ. ಸರಿಯೆಂದು ತಿಳಿಯುತ್ತೀರಿ ನಂತರ ಜಿದ್ದು ಮಾಡುತ್ತೀರಿ, ಇಲ್ಲವೆ ಸಿದ್ಧ ಮಾಡುತ್ತೀರಿ. ಇದು ವಶೀಭೂತ ಬುದ್ಧಿಯ ಚಿಹ್ನೆಯಾಗಿದೆ. ಇಂತಹ ಸಮಯದಲ್ಲಿ ಸದಾ ಒಬ್ಬ ಬಾಪ್‌ದಾದಾರವರ ಶ್ರೇಷ್ಠ ಮತವನ್ನು ನೆನಪಿಟ್ಟುಕೊಳ್ಳಿ- ಯಾರನ್ನು ತಂದೆಯು ನಿಮಿತ್ತ ಮಾಡಿದ್ದಾರೆಯೋ ಆ ನಿಮಿತ್ತ ಆತ್ಮರು ಯಾವ ಸಲಹೆಯನ್ನು ಕೊಡುತ್ತಾರೆಯೋ ಅದಕ್ಕೆ ಮಹತ್ವಿಕೆ ಕೊಡಬೇಕು. ಆ ಸಮಯದಲ್ಲಿ ನಿಮಿತ್ತರಾಗಿರುವವರು ಭಹುಷಃ ಯಾರ ಮಾತನ್ನೋ ಕೇಳಿ ಈ ರೀತಿ ಹೇಳುತ್ತಿದ್ದಾರೆಂದು ತಿಳಿಯಬೇಡಿ. ಇದರಲ್ಲಿ ಮೋಸಹೋಗುತ್ತೀರಿ. ನಿಮಿತ್ತರಾಗಿರುವ ಶ್ರೇಷ್ಠ ಆತ್ಮರ ಮೂಲಕ ಯಾವ ಶಿಕ್ಷಣ ಅಥವಾ ಸಲಹೆ ಸಿಗುತ್ತದೆಯೋ ಅದಕ್ಕೆ ಆ ಸಮಯದಲ್ಲಿ ಮಹತ್ವಕೆ ನೀಡುವುದರಿಂದ ಒಂದುವೇಳೆ ಏನೇ ಕೆಟ್ಟದ್ದಾದರೂ ಸಹ ತಾವು ಜವಾಬ್ದಾರರಲ್ಲ. ಹೇಗೆ ಬ್ರಹ್ಮಾತಂದೆಗಾಗಿ ಸದಾ ಹೇಳುತ್ತೇವೆ- ಒಂದುವೇಳೆ ಈ ಬ್ರಹ್ಮಾರವರ ಮೂಲಕ ಯಾವುದೇ ತಪ್ಪಾದರೂ ಸಹ ಆ ತಪ್ಪು ಬದಲಾಗಿ ತಮ್ಮ ಪ್ರತಿ ಅದು ಸರಿಯಾಗುವುದು ಹಾಗೆಯೇ ನಿಮಿತ್ತರಾಗಿರುವ ಆತ್ಮರಪ್ರತಿ ಎಂದೂ ಈ ವ್ಯರ್ಥ ಸಂಕಲ್ಪ ಬರಬಾರದು. ತಿಳಿದುಕೊಳ್ಳಿ. ಯಾವುದೇ ಅಂತಹ ನಿರ್ಣಯವನ್ನು ನಿಮಿತ್ತರು ಕೊಡುತ್ತಾರೆ ಅದು ತಮಗೆ ಸರಿಯೆನಿಸುವುದಿಲ್ಲ ಆದರೆ ಅದರಲ್ಲಿ ತಾವು ಜವಾಬ್ದಾರರಲ್ಲ. ತಮ್ಮದು ಪಾಪವಾಗುವುದಿಲ್ಲ. ತಮ್ಮ ಕಾರ್ಯವು ಸರಿಯಾಗುತ್ತದೆ. ಏಕೆಂದರೆ ಅಲ್ಲಿ ಬಾಬಾ ಇದ್ದಾರೆ. ತಂದೆಯು ಪಾಪವನ್ನೂ ಸಹ ಬದಲಾಯಿಸಿಬಿಡುವರು. ಇದು ಗುಹ್ಯ ರಹಸ್ಯವಾಗಿದೆ. ಗುಪ್ತ ಮೆಷಿನರಿಯಾಗಿದೆ ಆದ್ದರಿಂದ ನಿಮಿತ್ತರಾಗಿರುವ ಶ್ರೇಷ್ಠ ಆತ್ಮರ ಶ್ರೇಷ್ಠ

ಸಲಹೆಯನ್ನು ಮಹತ್ವಿಕೆಯಿಂದ ಕಾರ್ಯದಲ್ಲಿ ತೊಡಗಿಸಿರಿ. ಇದರಲ್ಲಿ ತಮ್ಮದೇ ಲಾಭವಿದೆ. ನಷ್ಟವೂ ಸಹ ಲಾಭದಲ್ಲಿ ಪರಿವರ್ತನೆಯಾಗುವುದು. ಇದು ತಂದೆಯ ಗ್ಯಾರಂಟಿಯಾಗಿದೆ. ತಿಳಿಯಿತೆ? ಆದ್ದರಿಂದ ತಿಳಿಸಿದೆವು- ಕರ್ಮಗಳ ಲೀಲೆಯು ಬಹಳ ವಿಚಿತ್ರವಾಗಿದೆ. ತಂದೆಯು ಜವಾಬ್ದಾರನಾಗಿದ್ದಾರೆ. ಯಾರನ್ನೂ ನಿಮಿತ್ತರನ್ನಾಗಿ ಮಾಡಿದ್ದಾರೆಯೋ ಅವರಿಗೂ ತಂದೆಯೇ ಜವಾಬ್ದಾರರಾಗಿದ್ದಾರೆ. ತಮ್ಮ ಪಾಪವನ್ನು ಬದಲಾಯಿಸುವುದಕ್ಕೂ ಜವಾಬ್ದಾರರಾಗಿದ್ದೇವೆ. ಕೇವಲ ಹಾಗೆಯೇ ನಿಮಿತ್ತ ಮಾಡಲಿಲ್ಲ. ಯೋಚಿಸಿ ಅರಿತುಕೊಂಡು ಡ್ರಾಮಾದ ನಿಯಮ ಅನುಸಾರ ನಿಮಿತ್ತರನ್ನಾಗಿ ಮಾಡಲಾಗಿದೆ. ತಿಳಿಯಿತೆ!

ನಿಮಿತ್ತ ಸಹೋದರಿಯರಿಗೆ ಇದು ಇಷ್ಟವಾಗುತ್ತದೆಯಲ್ಲವೆ. ಇದರಲ್ಲಿ ಲಾಭವಿದೆ. ಹೊರೆಯು ಹಗುರವಾಯಿತು. ಯಾವುದೇ ಮಾತು ಬಂದರೆ ನಿಮಿತ್ತರಾಗಿರುವ ಹಿರಿಯರಿಗೆ ಗೊತ್ತು ಎಂದು ಹೇಳುತ್ತೀರಿ, ಹಗುರರಾಗಿಬಿಟ್ಟಿರಿ ಅಲ್ಲವೆ. ಆದರೆ ಕೇವಲ ಹೇಳಿಕೆಗೆ ಮಾತ್ರವಲ್ಲ, ತಿಳಿದುಕೊಳ್ಳುವುದಕ್ಕಾಗಿ ಸ್ನೇಹಮಾತ್ರ. ಸ್ವಮಾನ ಮಾತ್ರವಾಗಿರಲಿ. ಈ ಗುಹ್ಯಮಾತುಗಳು ತಂದೆಗೆ ಗೊತ್ತು ಮತ್ತು ಯಾರು ಬುದ್ಧಿವಂತ ಮಕ್ಕಳಿದ್ದಾರೆಯೋ ಅವರಿಗೆ ಗೊತ್ತಿದೆ. ನಿಮಿತ್ತರಾಗಿರುವ ಆತ್ಮರಪ್ರತಿ ಏನಾದರೂ ಮಾತನಾಡುವುದು ಎಂದರೆ ತಂದೆಯಪ್ರತಿ ಮಾತನಾಡುವುದು. ತಂದೆಯು ನಿಮಿತ್ತರನ್ನಾಗಿ ಮಾಡಿದ್ದಾರಲ್ಲವೆ. ತಮಗೆ ತಂದೆಗಿಂತಲೂ ಹೆಚ್ಚು ಪರಿಶೀಲಿಸುವ ಶಕ್ತಿಯಿದೆಯೇ? ಬಾಪ್‌ದಾದಾರವರಿಗೆ ಎಲ್ಲಾ ಮಕ್ಕಳೊಂದಿಗೆ ಅತೀ ಸ್ನೇಹವಿದೆ. ಕೇವಲ ನಿಮಿತ್ತ ಆಗಿರುವವರೊಂದಿಗೆ ಪ್ರೀತಿಯಿದೆ, ಅನ್ಯರೊಂದಿಗೆ ಇಲ್ಲವೆಂದಲ್ಲ. ಈ ಸಲಹೆ ಸಹ ಪ್ರೀತಿಯ ಕಾರಣವೇ ಕೊಡುತ್ತಿದ್ದೇವೆ. ಪ್ರೀತಿಯಿಲ್ಲದೇ ಹೋಗಿದ್ದರೆ ಹೇಗೆ ನಡೆಯುತ್ತಿದ್ದಾರೆಯೋ ಹಾಗೆಯೇ ನಡೆಯುತ್ತಿರಲಿ. ನಮಗೇನು ಎಂದು ಹೇಳಬಹುದಾಗಿತ್ತು. ಯಾವಾಗ ಇಷ್ಟೊಂದು ಸಾಹಸವನ್ನು ಇಟ್ಟಿದ್ದೀರಿ ಮತ್ತು ಬ್ರಾಹ್ಮಣ ಜೀವನದಲ್ಲಿ ನಡೆಯುತ್ತಿದ್ದೀರಿ. ಹಾರುತ್ತಿದ್ದೀರಿ ಅಂದಮೇಲೆ ಚಿಕ್ಕ ಬಲಹೀನತೆಯೂ ಏಕೆ ಉಳಿಯಬೇಕು? ಇದು ಪ್ರೀತಿಯಾಗಿದೆ. ಪ್ರೀತಿಯಿರುವವರ ಕೊರತೆಯನ್ನು ಎಂದೂ ನೋಡಲು ಸಾಧ್ಯವಾಗುವುದಿಲ್ಲ. ಇದು ಪ್ರೀತಿಯ ಸಂಕೇತವಾಗಿದೆ. ಯಾರೊಂದಿಗೆ ಹೃದಯದ ಸತ್ಯಪ್ರೀತಿಯಿರುವುದೋ ಅವರ ಕೊರತೆಯನ್ನು ಸದಾ ತನ್ನ ಕೊರತೆಯೆಂದು ತಿಳಿಯುತ್ತಾರೆ. ಒಳ್ಳೆಯದು-

ಯಾವುದೇ ಕಾರ್ಯ ಮಾಡುವಾಗ ಎಂದೂ ಯಾವುದೇ ಏರುಪೇರಿನ ವಾತಾವರಣದ ಪ್ರಭಾವದಲ್ಲಿ ಬರಬೇಡಿ, ತಮ್ಮ ಪ್ರಭಾವವನ್ನು ಬೀರಿದಾಗ ಅವರು ತಮ್ಮ ಪ್ರಭಾವದಲ್ಲಿ ಬಂದುಬಿಡುತ್ತಾರೆ ಮತ್ತು ಹೃದಯದಿಂದ ಇದೇ ಹೊರಬರುವುದು ಸಫಲತೆಯು ಜನ್ಮಸಿದ್ಧ ಅಧಿಕಾರವಾಗಿದೆ. ಧೈರ್ಯಕ್ಕೆ ಬಹಳ ಮಹತ್ತಿಕೆಯಿದೆ. ಎಂದೂ ಯಾವುದೇ ಮಾತಿನಲ್ಲಿ ಗಾಬರಿಯಾಗಬೇಡಿ. ತಾವೂ ಸಹ ಸಾವಿರ ಭುಜಧಾರಿ ಆಗಿದ್ದೀರಿ. ತಂದೆಯ ಸಾವಿರ ಭುಜಗಳು ತಮ್ಮದೂ ಆಯಿತಲ್ಲವೆ. ಒಳ್ಳೆಯದು-

**ನಾಲ್ಕಾರು ಕಡೆಯ ಸದಾ ಪರಿಶೀಲಿಸುವ ಶಕ್ತಿಯ ವಿಶೇಷ ಆತ್ಮರಿಗೆ, ಸದಾ ಪ್ರತೀ ಕರ್ಮ ಮತ್ತು ಸಂಬಂಧದಲ್ಲಿ ಶ್ರೇಷ್ಠ ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ಸಫಲತಾ ಮೂರ್ತಿ ಆತ್ಮರಿಗೆ, ಸದಾ ಧೈರ್ಯ ಹಾಗೂ ಶುಭಭಾವನೆ-ಶುಭಕಾಮನೆಯ ಮೂಲಕ ಪರಿವರ್ತನೆ ಮಾಡುವಂತಹ ಶಕ್ತಿಶಾಲಿ ಆತ್ಮರಿಗೆ, ಸದಾ "ವಾಹ್ ನನ್ನ ಶ್ರೇಷ್ಠ ಕರ್ಮವೇ" ಎಂಬ ಖುಷಿಯ ಗೀತೆಯನ್ನು ಹಾಡುವಂತಹ ಮಕ್ಕಳಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ಅವ್ಯಕ್ತ ಮುರಳಿ/ ರಿವೈಸ್ ಕೋರ್ಸ್ 10-01-1990.

***ಪವಿತ್ರ ಹಂಸಗಳ ವಿಶೇಷತೆಗಳು***

ಹಂಸಕ್ಕೆ ವಿಶೇಷವಾಗಿ ನಿರ್ಣಯ ಶಕ್ತಿ ಮತ್ತು ಪರಿಶೀಲಿಸುವ ಶಕ್ತಿಯು ಇರುತ್ತದೆ ಆದ್ದರಿಂದ ಗ್ರಹಿಸುವ ಶಕ್ತಿಯೂ ವಿಶೇಷವಾಗಿರುತ್ತದೆ. ಅದರ ಆಧಾರದ ಮೇಲೆ ಮುತ್ತು ಮತ್ತು ಕಲ್ಲು ಎರಡನ್ನು ಗುರುತಿಸುತ್ತದೆ ಮತ್ತು ನಿರ್ಣಯ ಮಾಡುತ್ತದೆ ನಂತರ ಮುತ್ತುಗಳನ್ನು ಗ್ರಹಿಸುತ್ತದೆ. ಅಂದಾಗ ಪರಿಶೀಲಿಸುವುದು, ನಿರ್ಣಯ ಮಾಡುವುದು ಮತ್ತು ಗ್ರಹಿಸುವುದು ಅರ್ಥಾಥ್ ಧಾರಣೆ ಮಾಡಿಕೊಳ್ಳುವುದು.

ಹೇಗೆ ವೈದ್ಯನಿಗೆ ರೋಗವನ್ನು ಸರಿಯಾಗಿ ಪರಿಶೀಲಿಸಲು ಬರದೇ ಇದ್ದಾಗ ಕೊಡುವ ಔಷಧಿಯ ಪ್ರಭಾವದಿಂದ ಮತ್ತೊಂದು ರೋಗ ಬರುವ ಸಾಧ್ಯತೆ ಇರುತ್ತದೆಯೋ ಹಾಗೆಯೆ ಪ್ರತಿಯೊಂದು ಕಾರ್ಯವನ್ನು, ವ್ಯಕ್ತಿಯನ್ನು ಪರಿಶೀಲಿಸುವ ಶಕ್ತಿ ಇದ್ದಾಗ ಪ್ರತಿಯೊಂದು ಪ್ರಕಾರದ ಸೇವೆ ಅರ್ಥಾತ್ ಮನಸಾ, ವಾಚ, ಕರ್ಮಣಾ ಮೂರರಲ್ಲಿಯೂ ಸದಾ ಸಫಲತೆಯ ಅನುಭವವಾಗುತ್ತದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ನಿರ್ಣಯ ಶಕ್ತಿ, ಪರಿಶೀಲಿಸುವ ಶಕ್ತಿ, ಗ್ರಹಿಸುವ ಶಕ್ತಿ ಮೂರು ಶಕ್ತಿಗಳ ಜ್ಞಾನವನ್ನು ಧಾರಣೆ ಮಾಡಿರುವ ವಿಶೇಷ ಆತ್ಮ.

2. ನಾನು ಬ್ರಾಹ್ಮಣ ಜೀವನವನ್ನು ಧಾರಣೆ ಮಾಡುತ್ತಲೇ ಜ್ಞಾನದಿಂದ ಮತ್ತು ವಿವೇಕದಿಂದ ಮೊದಲು ಪರಿಶೀಲಿಸುವ ಶಕ್ತಿಯಿಂದ ತಂದೆಯನ್ನು, ಸ್ವಯಂನ್ನು, ಸಮಯವನ್ನು, ಬ್ರಾಹ್ಮಣ ಪರಿವಾರವನ್ನು ಗ್ರಹಿಸಿದ್ದೇನೆ. ನಂತರ ಇವರೇ ಕಲ್ಪಪೂರ್ವದ ಅನಂತವಾದ ತಂದೆ ಪರಮಾತ್ಮ, ನಾನು ಕಲ್ಪಪೂರ್ವದ ಶ್ರೇಷ್ಠ ಅಧಿಕಾರಿ ಆತ್ಮ ಎಂದು ಪರಿಶೀಲಿಸಿ ನಂತರ ನಿರ್ಣಯವನ್ನು ತೆಗೆದುಕೊಂಡಿದ್ದೇನೆ.

3. ನಾನು ಎರಡು ಶಕ್ತಿಗಳನ್ನು (ಪರಿಶೀಲಿಸುವ ಶಕ್ತಿ, ನಿರ್ಣಯ ಶಕ್ತಿ) ಧಾರಣೆ ಮಾಡಿ ಸಹಜಯೋಗಿ ಜೀವನವನ್ನು ತಯಾರು ಮಾಡಿಕೊಂಡಿರುವ ಪವಿತ್ರ ಹಂಸ.

4. ನಾನು ಪರಿಶೀಲಿಸುವ ಶಕ್ತಿ ನಿರ್ಣಯ ಶಕ್ತಿಯಿಂದ ಸದಾ ಸೇವೆ, ಪ್ರತಿಯೊಂದು ಕರ್ಮ ಮತ್ತು ಸಂಬಂಧ ಸಂಪರ್ಕದಲ್ಲಿ ಶ್ರೇಷ್ಠ ಸಫಲತೆಯನ್ನು ಹೊಂದಿದ್ದೇನೆ.

5. ನಾನು ಪ್ರತಿಯೊಬ್ಬರ ನಾಡಿಯನ್ನು ಪರಿಶೀಲಿಸಿ ಯಾವ ಆತ್ಮನಿಗೆ ಯಾವ ಸಹಯೋಗ, ಯಾವ ಸಮಯದಲ್ಲಿ ಬೇಕಾದುದನ್ನು ಕೊಟ್ಟು ಸಫಲತೆಯನ್ನು ಪಡೆದಿರುವ ನಂಬರ್ ಒನ್ ಸಫಲತಾ ಮೂರ್ತಿ.

6. ನಾನು ಇಡೀ ದಿನ "ವಾಹ್ ನನ್ನ ಶ್ರೇಷ್ಠ ಕರ್ಮಗಳ ಲೀಲೆ" ಎಂಬ ಹಾಡನ್ನು ಹಾಡುತ್ತಿದ್ದೇನೆ.

7. ನಾನು ಪರಿಶೀಲಿಸುವ ಶಕ್ತಿಯನ್ನು ಹೆಚ್ಚಿಸಿಕೊಂಡು ನನ್ನ ಕರ್ಮಗಳನ್ನು ಮತ್ತು ಇತರರ ಕರ್ಮಗಳನ್ನು ಯಥಾರ್ಥವಾಗಿ ಪರಿಶೀಲಿಸಿದ್ದೇನೆ.

8. ವಾತಾವರಣದ ಪ್ರಭಾವ ನನ್ನ ಮೇಲೆ ಬೀಳುವುದಿಲ್ಲ ಆದರೆ ನನ್ನ ಪ್ರಭಾವ ವಾತಾವರಣದ ಮೇಲೆ ಬೀಳುತ್ತದೆ.